ಸಾಕ್ಷಿಯನ್ನು ದಿನಾಂಕ 22.02.2024 ರಂದು ಪುನಃ ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಕೆ.ಆರ್ , ವಕೀಲರಿಂದ :**

| | |
|---|---|
| ನಿಪಿ.4 | ಸುತ್ತೋಲೆ |
| ನಿಪಿ.5 | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಮಾಡಿರುವ ಐತೀರ್ಪಿನ ತಃಖ್ತೆ |
| ನಿಪಿ.6 | ವಾಣಿಜ್ಯ ಬೆಳೆಗಳ ಬೆಳೆ ಧಾರಣೆ ಪತ್ರ |
| ನಿಪಿ.7 | ಸಿರಾ ಉಪನೋಂದಣಾಧಿಕಾರಿಯವರು ನೀಡಿರುವ ಮಾರುಕಟ್ಟೆ ಮೌಲ್ಯದ ಪತ್ರ |

**ಪಾಟೀಸವಾಲುಃ ಎದುರುದಾರರ ಪರ ಶ್ರೀ.ಎಂ.ಎಸ್.ಪಿ. ವಕೀಲರಿಂದಃ**

ನಿಪಿ.4 ರಲ್ಲಿ ಹಲಸಿನ ಮರದ ಬಗ್ಗೆ ಯಾವುದೇ ಮೌಲ್ಯ ಮಾಪನ ಮಾಡಿರುವುದಿಲ್ಲ ಎಂದರೆ ಗೊತ್ತಿಲ್ಲ. ನಿಪಿ.4 ರಲ್ಲಿ ಕೇವಲ ಹಲಸಿನ ಸಸಿಯನ್ನು ತೋರಿಸಿದ್ದಾರೆ , ಹಲಸಿನ ಮರ ತೋರಿಸಿಲ್ಲ ಎಂದರೆ ಗೊತ್ತಿಲ್ಲ. ನಿಪಿ.5 ಕ್ಕೂ ಮತ್ತು ನನ್ನ ಜಮೀನಿಗೂ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ಎದುರುದಾರರ ನನ್ನ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡಿಲ್ಲ ಎಂದರೆ ಸರಿ. ನಿಪಿ.6 ನನ್ನ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ನಿಪಿ.7 ರಲ್ಲಿ ನನ್ನ ಜಮೀನಿನ ಸರ್ವೆ ನಂಬರ್ ತೋರಿಸಿಲ್ಲ ಎಂದರೆ ಸರಿ. ಜಿಲ್ಲಾಧಿಕಾರಿಯವರ ಆದೇಶದಂತೆ ನನಗೆ ಸೂಕ್ತವಾದ ಪರಿಹಾರವನ್ನು ಎದುರುದಾರರು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

6 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ